ಅದರ cost of production ಪ್ರಕಾರ ಕೊಡುತ್ತಿದ್ದೀರೋ ?

ಶ್ರೀ ಟಿ. ಸಿದ್ದಲಿಂಗಯ್ಯನವರು.— Old rate ಮೇಲೆ 25% ಕೊಡಲಾಗಿದೆ.

Introduction of Uniform Sets of Weights and Measures.

Q.—169. **Sri K. V. BYRE GOWDA** (Bangalore North).—

Will the Government be pleased to state :—

(*a*) whether they are aware of the variety of weights and measures that are being used in the State ;

(*b*) whether they intend to put an end of these irregular weights and measures by issuing an uniform set of weights and measures ?

A.—**Sri T. SIDDALINGAIYA** (Minister for Industries).—

(*a*) Yes.

(*b*) Proposals for necessary legislative measures in this connection are being worked up in the department concerned.

ಶ್ರೀ ಕೆ. ವಿ. ಬೈರೇಗೌಡರು.—ನನ್ನ (ಬ) ಪ್ರಶ್ನೆಗೆ ಉತ್ತರವಾಗಿ "ನಿಯಮಗಳನ್ನು ಸಿದ್ಧಪಡಿಸುವ ಕೆಲಸ" ನಡೆಯುತ್ತಿದೆ ಎಂದು ಹೇಳಿದ್ದೀರಿ, ಅದು ಯಾವಾಗಿನಿಂದ ಪ್ರಾರಂಭವಾಗಿದೆ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಈ ವಿಚಾರಗಳೆಲ್ಲ ಸರ್ಕಾರದವರ ಗಮನಕ್ಕೆ ಬಂದಿವೆ. ಈ ಸಂಬಂಧವಾಗಿ ಚೀಫ್ ಮಾರ್ಕೆಟಿಂಗ್ ಆಫೀಸರಿಂದ ಒಂದು ವರದಿ ಸಹ ಬಂದಿದೆ. ಅದನ್ನೆಲ್ಲಾ ಸಂಬಂಧಪಟ್ಟ ಇಲಾಖೆಯವರು ಆಲೋಚನೆ ಮಾಡುತ್ತಿದ್ದಾರೆ.

ಶ್ರೀ ಕೆ. ವಿ ಬೈರೇಗೌಡರು.—ಈಗ ತಾತ್ಕಾಲಿಕವಾಗಿಯಾದರೂ ಏನಾದರೂ ಕಾರ್ಯಕ್ರಮ ಕೈಕೊಂಡು ಈ ತೊಂದರೆಯನ್ನು ತಪ್ಪಿಸುತ್ತೀರಾ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ತಾತ್ಕಾಲಿಕವಾಗಿ ಏನು ಮಾಡಲು ಸಾಧ್ಯ? ಲೆಜಿಸ್ಲೇಷನ್ ಇಲ್ಲದೆ ಜಾರಿಗೆ ಕೊಡುವುದಕ್ಕಾಗುವುದಿಲ್ಲ. ಆದ್ದರಿಂದ ಒಂದೇ ಸಲ ಅಖ್ಯೆರಾಗಿ ಲೆಜಿಸ್ಲೇಷನ್ ಮಾಡಬೇಕೆಂಬುದು ಆಲೋಚನೆಯಲ್ಲಿದೆ.

ಶ್ರೀ ಕೆ. ವಿ. ಬೈರೇಗೌಡರು.—ಇದರಿಂದ ರೈತರಿಗೆ ಬಹಳಮಟ್ಟಿಗೆ ನಷ್ಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ತಾವು ಹೇಳುವ ಕಾರಣ ನಮ್ಮ ಮನಸ್ಸಿಗೂ ಬಂದು ಬದಲಾವಣೆ ಮಾಡಬೇಕೆಂದು ಮಾಡುವುದಕ್ಕೆ ಪ್ರಾರಂಭ ಮಾಡಿದ್ದೇವೆ.

ಶ್ರೀ ಕೆ. ವಿ. ಬೈರೇಗೌಡರು.— ಖಚಿತವಾಗಿ ಯಾವಾಗ ಸರಿಪಡಿಸಲಾಗುತ್ತದೆ ?

(ಉತ್ತರವಿಲ್ಲ.)

Villages in Bangalore District supplied with electricity for lighting.

Q.—181. **Sri A. V. NARASIMHA REDDY** (Bangalore South).—

Will the Government be pleased to state :—

the number of villages supplied with electricity for lighting in Bangalore District from 1947 to 1952 March (details of each taluk may kindly be furnished) ?

A.—**Sri T. SIDDALINGAIYA** (Minister for Industries).—

79.

1.	Bangalore South	...	24
2.	Do North	...	21
3.	Devanahalli	...	18
4.	Dodballapur	...	6
5.	Anekal	...	4
6.	Ramanagaram	...	2
7.	Magadi	...	2
8.	Kanakapura	..	2
	Total		79

ಶ್ರೀ ಎ. ವಿ. ನರಸಿಂಹರೆಡ್ಡಿಯವರು.—ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ 1947ರಿಂದ 1952ರ ವರೆಗೆ 24 ಗ್ರಾಮಗಳಿಗೆ ವಿದ್ಯುಜ್ಜಕ್ತಿ ಒದಗಿಸಲಾಗಿದೆಯೆಂದು ಹೇಳಿದೆ. ಆ ಗ್ರಾಮಗಳು ಯಾವುವು ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದನ್ನು ತಿಳಿಸಲು ಬಹಳ ಹೆಚ್ಚಾಗಿದೆ. The list will be placed on the table.

ಶ್ರೀ ಎ. ವಿ. ನರಸಿಂಹರೆಡ್ಡಿಯವರು.—ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ ಇನ್ನೂ ಎಷ್ಟು ಗ್ರಾಮಗಳಿಗೆ ವಿದ್ಯುಜ್ಜಕ್ತಿ ಕೊಡಬೇಕೆಂದು ಅಂದಾಜು ಮಾಡುತ್ತಿದೆ !

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದನ್ನು ಹೇಳುವುದಕ್ಕಾಗುವುದಿಲ್ಲ. ಡಿಮ್ಯಾಂಡ್ ಮೇಲೆ ಅದನ್ನು ಯೋಚನೆಮಾಡಲಾಗುತ್ತದೆ.

ಶ್ರೀ ಎ. ವಿ. ನರಸಿಂಹರೆಡ್ಡಿಯವರು.—ಈಗ ಅಂದಾಜಾಗಿರುವುದು ಯಾವ ಗ್ರಾಮಗಳಿಗೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದಕ್ಕೆ ನೋಟೀಸ್ ಬೇಕು.

ಶ್ರೀ ಎಚ್. ಹುಚ್ಚಮಾಸ್ತಿಗೌಡರು (ಹುಲಿಯೂರುದುರ್ಗ).—ರಾಮನಗರ, ಕನಕಪುರ ಮತ್ತು ಮಾಗಡಿ, ಈ ಮೂರು ತಾಲ್ಲೂಕುಗಳಲ್ಲಿ ಕಡಮೆಯಿರುವುದನ್ನು ಸರಿಪಡಿಸುತ್ತೀರಾ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಯಾವತ್ತೂ ಹುಡುಕಿಕೊಂಡು ಹೋಗಿ ಸರಿಪಡಿಸುತ್ತೇವೆ ಎಂದು ಸರ್ಕಾರವು ಪ್ರಯತ್ನ ಮಾಡುವುದಿಲ್ಲ. ಈಗಿರುವ ಡಿಮ್ಯಾಂಡನ್ನು ಮೀಟ್ ಮಾಡಿದರೆ ಸಾಕು. ಆದ್ದರಿಂದ ಈಗ ಏನೂ ವಾಗ್ದಾನ ಮಾಡುವುದಕ್ಕೆ ಸಾಧ್ಯವಿಲ್ಲ.